8. ಕಂಟ್ರಾಕ್ಟು ಮುಚ್ಚಳಿಕೆಗೆ ಅವಶ್ಯಕವಾದ ಸ್ಟ್ಯಾಂಪು ಹಾಸಲ್ ಸುದಾ ಕಂಟ್ರಾಕ್ಟುದಾರನಿಂದಲೇ ಪಾವತೀ ಮಾಡಲ್ಪಡ ಬೇಕು.

9. ಪದಾರ್ಥಗಳು ಬೇಲ್‌ಗಳಾಗಿಯಾಗಲಿ ಮೂಟೆಗಳಾಗಿಯಾಗಲಿ ವಿಸಲ್ಪಡುವದಾದರೆ ಅವುಗಳಿಗೆ ನೀರಿನಿಂದಲೂ ವಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವದರಿಂದಲೂ ನಷ್ಟ ಸಂಭವಿಸದಂತೆ ಅವುಗಳು ಭದ್ರವಾಗಿ ಪ್ಯಾಕ್ ಮಾಡಲ್ಪಡಬೇಕು.

10. ವಿಸಿಕೊಳ್ಳುವ ದರಗಳಲ್ಲಿ ಬೆಂಗಳೂರಲ್ಲಿ ತಂದು ವಿಸುವ ಲಾಗವಡು ಅಡಗಿರತಕ್ಕದ್ದು, ಮತ್ತು ಪದಾರ್ಥಗಳು, ಬೆಂಗಳೂರಲ್ಲಿರುವ ಸ್ಟೇಷನರೀ ಡಿಪೋದಲ್ಲಿ 1891ನೇ ಇಸವಿ ಮಾರ್ಚಿ 10ನೇ ತಾರೀಖು ಯಾ ತತ್ಪೂರ್ವದಲ್ಲಿ ಒಪ್ಪಿಸಲ್ಪಡತಕ್ಕದ್ದು.

11. ಅಂಗೀಕರಿಸಲ್ಪಡದ ದರಖಾಸ್ತುದಾರರ ಠೇವಣೀ ಮೊಬಲಗು ಅವರ ದರಖಾಸ್ತು ಯಿತ್ಯರ್ಥವಾದ ಕೂಡಲೇ ಇತರರ ಠೇವ ಣಿ ಮೊಬಲಗು ಕಂಟ್ರಾಕ್ಟು ಮುಗಿದ ತರುವಾಯವೂ ವಾಪಸ್ ಮಾಡಲ್ಪಡುವದು.

12. ಇದರಡಿ ರುಜುಮಾಡಿರುವವರು ಯಾವ ದರಖಾಸ್ತನ್ನಾಗಲಿ ಸಬಬ್ ನಮೂದಿಸದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ತಾರೀಖು 11ನೇ ಡಿಶಂಬರ್ 1890.

ನಂ. 326.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಪ್ರಕಾರ ಮೈಸೂರು ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜಿನಲ್ಲಿರುವ ಪ್ರೊಬೇಷನರ್ ಮೆಸ್ಟರ್ ಎಂ. ನಂಜರಾಜ್ ಅರಸಿನವರು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ವೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 12ನೇ ಡಿಶಂಬರ್ 1890.

ನಂ. 327.—ಇದರಿಂದ ಪ್ರಕಟಿಪಡಿಸುವದೇನಂದರೆ, ಮೈಸೂರು ಸಂಸ್ಥಾನದ ತಮಾಂ ಪಬ್ಲಿಕ್ ಆಫಿಸುಗಳೂ ಕ್ರಿಸ್‌ಮಸ್ ರಜಾಕ್ಕೋಸ್ಕರ 1890ನೇ ಇಸವಿ ಡಿಶಂಬರ್ 22ನೇ ಮುಕ್ತಂ ಸೋಮವಾರದಾರಭ್ಯ 1891ನೇ ಇಸವಿ ಜನವರಿ 3ನೇ ಮುಕ್ತಂ ಶನಿ ವಾರ ಪರ್ಯಂತ ಬರಖಾಸ್ತು ಮಾಡಲ್ಪಡತಕ್ಕದ್ದು.

ಜರೂರಿಯಾತ್ ಕೆಲಸ ಚಲಾವಣಿ ಬಗ್ಯಾಗಿ ಇಲಾಖಾ ವೊಪ್ತೇಸರರಿಂದ ಏರ್ಪಾಡು ಮಾಡಲ್ಪಡತಕ್ಕದ್ದು.

ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಕಛೇರಿಗಳಿಗಾಗಲಿ ಜಮಾಬಂದೀ ಕೆಲಸ ನಡಿಸುತ್ತಿರುವ ಆಫಿಸರರಿಗಾಗಲಿ ಅನ್ವಯಿಸುವದಿಲ್ಲವು.

ಹುಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರೆಟರಿ.

ವಿದ್ಯಾಭ್ಯಾಸದ ಇಲಾಖೆ.

ತಾರೀಖು 9ನೇ ಡಿಶಂಬರ್ 1890ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀಯ ಪರೀಕ್ಷೆಯು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳದ ಸರ್ಕಾರೀ ಕಾಲೀಜ್ ಅಥವಾ ಹೈ ಸ್ಕೂಲಿನಲ್ಲಿ ನಡಿಸಲ್ಪಡುವದು. ಸದರೀ ಪರೀಕ್ಷೆಯು ಸ್ಯ 1891ನೇ ಇಸವಿ ಫಿಬ್ರವರಿ ತಿಂಗಳ 16ನೇ ಸೋಮವಾರದ ದಿವಸ ಆರಂಭಿ ಸುತ್ತದೆ. ಪರೀಕ್ಷೆಯು ಇದರಡಿಕಂಡ ಕಾಲಕ್ರಮವಾಗಿ ನಡೆಸಲ್ಪಡುವದು.

ದಿವಸ.	ವಿದ್ಯಾರ್ಥಿಗಳ ಪರೀಕ್ಷೆ.		ಉಪಾಧ್ಯಾಯರ ಪರೀಕ್ಷೆ.	
	ಘಂಟೆ.	ಅಂಕಗಳು.	ಘಂಟೆ.	ಅಂಕಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ.	ಭಾಷಾ ಗ್ರಂಥ ಮತ್ತು ವ್ಯಾಕರಣ (ಆವಶ್ಯಕ ಭಾಷೆ)	10ರಿಂದ 1ರವರಿಗೆ	ಪದ್ಯಕಾವ್ಯ ವಾಕ್ಯವಿಭಜನೆ.
	2 „ 5 „	ಡಿಟೋ ಡಿಟೋ (ಎರಡನೇ ಭಾಷೆ)	2 „ 4 „	ವ್ಯಾಕರಣ.
			4 „ 5 „	ವಾಕ್ಯರಚನೆ.
ಎರಡನೇ ದಿವಸ.	10ರಿಂದ 12ರ ವರಿಗೆ	ಹಿಂದೂ ಚರಿತೆ)	10ರಿಂದ 1ರವರಿಗೆ	ಹಿಂದೂಚರಿತೆ).
	12 „ 12·30 „	ಉಕ್ತ ಲೇಖನ (ಆವಶ್ಯಕಭಾಷೆ)		
	2·30 „ 1 „	ಬರವಣಿಗೆ (ಡಿಟೋ)	2 „ 4 „	ರೇಖಾಗಣಿತ.
	2 „ 5 „	ಭೂಗೋಳ, ಭೂಪಟ ನಕ್ಷೆಬರಿಯುವಿಕೆ.		

817

ಮೂರನೇ ದಿವಸ.	10ರಿಂದ 12ರ ವರಿಗೆ 12 „ 12 „ 30 12·30 „ 1 „ 2 „ 3 30 3· 30 „ 5 „	ಅಂಕಗಣಿತ ಉಕ್ತಲೇಖನ (ಎರಡನೇ.ಭಾಷೆ) ಬರವಣಿಗೆ (ಡಿಟೋ) ವ್ಯವಸಾಯಶೋಧನಿ ಆರೋಗ್ಯಶೋಧನಿ	10ರಿಂದ 1ರವರಿಗೆ 2 „ 4 „	ಅಂಕಗಣಿತ, ಬೀಜಗಣಿತ.
ನಾಲ್ಕನೆ ದಿವಸ.	10ರಿಂದ11-30ವರಿಗೆ 11. 30 1 „ 2 3 30 3·30 „ 5 „	ಕ್ಷೇತ್ರಗಣಿತ ಭಾಷಾಂತರ ಹೊಲಿಗೆ ಪಾಕಶಾಸ್ತ್ರ)	10ರಿಂದ 1ರವರಿಗೆ 2 „ 5 „	ಭೂಗೋಳ. ಶಾಸ್ತ್ರಪಾಠ.
ಐದನೇ ದಿವಸ.	..	..	10ರಿಂದ 1ರವರಿಗೆ	ಪಾಠಶಾಲೆಯನ್ನು ನಡೆಸುವ ಕ್ರಮ.

ಇದರಿಂ ನಮೂದಿಸಲ್ಪಟ್ಟ ಅಂಕಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರೀಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರೀಕ್ಷೆಯಾಗುವ ಕೊಟ್ಟಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥಾ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಟ್ಟಡಿಯನ್ನು ಬಂದಾವರ್ತಿಬಿಟ್ಟು ಬಂದ ಅನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ವುಂಟಾಗಲಾರದು, ಅಲ್ಲದೆ ತನ್ನ ಉತ್ತರ ಪತ್ರಿಕೆಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷೇ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೇ ಕೊಟ್ಟಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಎಜ್ಯುಕೇಷನ್ ಸೆಕ್ರಿಟೆರೀ ಸಾಹೆಬರವರಿಗೆ ತಿಳಿಸಲ್ಪಡುವದು.

4. ಪರೀಕ್ಷೆ ಕೊಟ್ಟಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅಕವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಟ್ಟಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಎಜ್ಯುಕೇಷನ್ ಸೆಕ್ರಿಟೆರೀ ಸಾಹೆಬರವರಿಗೆ ತಿಳಿಸಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ಟಿಂಡೆಂಟರು ಕಾಗದಗಳನ್ನು ತೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯ ಹೆಸರು ರೆಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

7. ಪ್ರಶ್ನ ಕಾಗದಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷೇ ಕೊಟ್ಟಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನೆ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. "ವಿಶಿಷ್ಟ ಕೆಟ್ಟುಹೋದ ಕಾಗದ ವಗೈರೆಗಳು" ವಿದ್ಯಾರ್ಥಿಯು ಬರಿಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ, ಎಂ. ಎ.,
ಎಜ್ಯುಕೇಷನ್ ಸೆಕ್ರಿಟೆರಿ.